ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೦ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ನಮ್ಮ ತಾಲ್ಲೂಕಿನಲ್ಲಿ ೧೦ ಹುದ್ದೆಗಳು ಖಾಲಿ ಇವೆ. ಕುಂದಾಪುರ ಹಾಗೂ ಬೈಂದೂರ್‌ನಲ್ಲಿ ೧೦ ಹುದ್ದೆಗಳು ಖಾಲಿ ಇವೆ. ಈ ದೃಷ್ಟಿಯಿಂದ ಸಹ ನಮ್ಮ ತಾಲ್ಲೂಕು ಬಹಳ ಅಲಕ್ಷ್ಯವಾಗಿದೆ. ಇದನ್ನು ತುಂಬುವ ಬಗ್ಗೆ ಏನು ಪ್ರಯತ್ನ ಮಾಡುತ್ತೀರಿ ? ಎರಡನೆಯದಾಗಿ, ಹೆಚ್ಚುವರಿ ವೈದ್ಯಾಧಿಕಾರಿಗಳು ಇರುವ ಕಡೆಯಿಂದ ಅಲ್ಲಿಂದ ಇಲ್ಲಿಗೆ ವರ್ಗಾವಣೆ ಮಾಡಿ, ಒಂದು ಸಮಾನ ರೀತಿಯಲ್ಲಿ ಹಂಚಿಕೆ ಮಾಡುವುದಕ್ಕೆ ಸರ್ಕಾರ ಏನಾದರೂ ಆಲೋಚನೆ ಮಾಡುತ್ತಿದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದ ಹಾಗೆ ಕೆಲವು ವೈದ್ಯರುಗಳು ಪಿ. ಜಿ. ಕೋರ್ಸಿಗೆ ಹೋಗಿರುವುದರಿಂದ ಅಂತ ಹುದ್ದೆಗಳು ಖಾಲಿ ಇವೆ. ಖಾಲಿಯಿರುವ ಕೆಲವನ್ನು ನಾವು ಸಾಮಾನ್ಯ ವರ್ಗಾವಣೆಯ ಸಮಯದಲ್ಲಿ ತುಂಬುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎಸ್. ಆಚಾರ್.— ಪಿ. ಜಿ. ಕೋರ್ಸಿಗೆ ಹೋದ ಸಂದರ್ಭದಲ್ಲಿ ಸಹ ಆ ಸ್ಥಾನವನ್ನು ತುಂಬುವುದು ಸರ್ಕಾರದ ಕರ್ತವ್ಯ. ಇದರಿಂದ ಲೋಪವಾಗಿದೆ. ಆದ್ದರಿಂದ ಸಾಮಾನ್ಯವಾಗಿ ಹೆಚ್ಚುವರಿ ವೈದ್ಯಾಧಿಕಾರಿಗಳು ಎಲ್ಲಿದ್ದಾರೆ, ಅವರನ್ನು ತೆಗೆದು ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಕೂಡಲೇ ಹಾಕಬೇಕು ಏತಕ್ಕೆಂದರೇ ಇಡೀ ಆಸ್ಪತ್ರೆಯನ್ನು ಖಾಲಿ ಇಡುವುದಕ್ಕಿಂತ ಕೆಲವು ವೈದ್ಯಾಧಿಕಾರಿಗಳನ್ನಾದರೂ ಅಂತಹ ಜಾಗಗಳಲ್ಲಿ ತುಂಬಿಸುವುದು ಸರ್ಕಾರದ ಕರ್ತವ್ಯ. ಇದು ಸಾಮಾನ್ಯ ವರ್ಗಾವಣೆಯ ಮುಂಚಿಯೇ ಆಗಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.— ಸಾಮಾನ್ಯ ವರ್ಗಾವಣೆ ಏಪ್ರಿಲ್ ತಿಂಗಳಿನಲ್ಲಿ ಆಗುತ್ತದೆ. ಆಗ ಮಾಡುತ್ತೇವೆ.

## ರಾಜ್ಯದಲ್ಲಿರುವ ಸಹಕಾರ ಸಕ್ಕರೆ ಕಾರ್ಖಾನೆಗಳು

೬೮. ಶ್ರೀ ಜಿ. ರಾಜುಗೌಡ (ಹೆನೂರು).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸಹಕಾರ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ಎಷ್ಟು ಕಾರ್ಖಾನೆಗಳು ಲಾಭದಾಯಕವಾಗಿ ನಡೆಯುತ್ತಿವೆ ?

ಇ) ನಷ್ಟವನ್ನು ಅನುಭವಿಸುತ್ತಿರುವ ಕಾರ್ಖಾನೆಗಳನ್ನು ಲಾಭದಾಯಕವಾಗಿ ನಡೆಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಸಚಿವರು).—

ಅ) ೧೬

ಆ) ೧೨

ಇ) ಸಹಕಾರ ಸಕ್ಕರೆ ಕಾರ್ಖಾನೆಗಳು ಹಣಕಾಸು ಸಂಸ್ಥೆಗಳಿಂದ ಪಡೆದುಕೊಂಡ ಸಾಲ ಹಾಗೂ ಬಡ್ಡಿಯ ಮರುಪಾವತಿಯ ರೀಷಡ್ಯೂಲ್ ಮಾಡಲು ಹಣಕಾಸು ಸಂಸ್ಥೆಗಳೊಂದಿಗೆ ಸಮಾಲೋಚನೆ, ಸರ್ಕಾರದಿಂದ ಸಾಲ ನೀಡಿಕೆ, ಹಾಗೂ ಸಹಕಾರ ಸಕ್ಕರೆ ಕಾರ್ಖಾನೆಗಳು ಪಡೆಯುವ ಸಾಲಕ್ಕೆ ಖಾತರಿ ನಿಲ್ಲುವಿಕೆ ಮುಂತಾದ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ.

ಶ್ರೀ ಜಿ. ರಾಜುಗೌಡ.— ೧೯೮೮-೮೯ನೇ ಸಾಲಿನಲ್ಲಿ ೧೬ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಯಾವ ಯಾವ ಕಾರ್ಖಾನೆಗಳು ಎಷ್ಟೆಷ್ಟು ಲಾಭವನ್ನು ಗಳಿಸಿವೆ ? ಮತ್ತು ಯಾವ ಯಾವ ಕಾರ್ಖಾನೆಗಳು ನಷ್ಟವನ್ನು ಹೊಂದಿವೆ ? ಈ ೧೬ ಸಕ್ಕರೆ ಕಾರ್ಖಾನೆಗಳಲ್ಲಿ ಅತಿ ಹೆಚ್ಚಿನ ಲಾಭವನ್ನು ಗಳಿಸಿರತಕ್ಕ ಕಾರ್ಖಾನೆಗಳು ಯಾವುವು ಮತ್ತು ಒಂದು ಟನ್ ಕಬ್ಬು ಅರೆಯುವುದಕ್ಕೆ ತಗಲುವ ವೆಚ್ಚ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಅಧ್ಯಕ್ಷರು.— ಇಷ್ಟೊಂದು ಪ್ರಶ್ನೆಗಳನ್ನು ಒಟ್ಟಿಗೆ ಕೇಳಿದರೆ ಹೇಗೆ ? ಅದೂ ಬಹಳ ದೊಡ್ಡ ಪ್ರಶ್ನೆಗಳು.

ಶ್ರೀ ಜಿ. ರಾಜಂಗೌಡ.— ೧೯೮೮-೮೯ರಲ್ಲಿ ಎಷ್ಟು ಕಾರ್ಖಾನೆಗಳು ಲಾಭವನ್ನು ಗಳಿಸಿವೆ ಮತ್ತು ಎಷ್ಟು ಕಾರ್ಖಾನೆಗಳು ನಷ್ಟವನ್ನು ಅನುಭವಿಸಿವೆ ಎಂಬ ವಿವರಗಳನ್ನು ತಿಳಿಸುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.— ೧೯೮೮-೮೯ನೇ ಸಾಲಿನಲ್ಲಿ ಈ ಕೆಳಕಂಡ ಸಕ್ಕರೆ ಕಾರ್ಖಾನೆಗಳು ಲಾಭವನ್ನು ಗಳಿಸಿವೆ. ಮತ್ತು ಕೆಲವು ನಷ್ಟವನ್ನೂ ಹೊಂದಿವೆ. ಅದರ ವಿವರ ಈ ರೀತಿ ಇದೆ.

| | | | | |
|---|---|---|---|---|
| ೧) | ಕಂಪ್ಲಿ | ... | ಲಾಭ | ೧೬.೭೯ ಲಕ್ಷ ರೂ. |
| ೨) | ಪಾಂಡವಪುರ | ... | ಲಾಭ | ೫೦.೩೩ ಲಕ್ಷ ರೂ. |
| ೩) | ಹಿರಣ್ಯಕೇಶಿ | ... | ಲಾಭ | ೧೦.೩೪ ಲಕ್ಷ ರೂ. |
| ೪) | ಬೀದರ್ | ... | ಲಾಭ | ೧೧೩.೧೦ ಲಕ್ಷ ರೂ. |
| ೫) | ಚಿಕ್ಕೋಡಿ | ... | ಲಾಭ | ೨೧೨.೧೮ ಲಕ್ಷ ರೂ. |
| ೬) | ಮಲಪ್ರಭ | ... | ಲಾಭ | ೬೭.೨೦ ಲಕ್ಷ ರೂ. |
| ೭) | ರಾಯಭಾಗ್ | ... | ಲಾಭ | ೧೭೬.೭೯ ಲಕ್ಷ ರೂ. |
| ೮) | ಭದ್ರಾ | . . | ಲಾಭ | ೬೬.೪೫ ಲಕ್ಷ ರೂ. |
| ೯) | ಗೋಕಾಕ್ | ... | ಲಾಭ | ೮೯.೪೮ ಲಕ್ಷ ರೂ. |
| ೧೦) | ಶ್ರೀ ಶ್ರೀರಾಮ | ... | ನಷ್ಟ | ೯೦.೧೫ ಲಕ್ಷ ರೂ. |
| ೧೧) | ಹೇಮಾವತಿ | ... | ಲಾಭ | ೧೩.೪೬ ಲಕ್ಷ ರೂ. |
| ೧೨) | ದಕ್ಷಿಣ ಕನ್ನಡ | ... | ನಷ್ಟ | ೪೪.೯೩ ಲಕ್ಷ ರೂ. |
| ೧೩) | ಪಾಲಸಿದ್ಧನಾಥ | ... | ಲಾಭ | ೭೧.೩೨ ಲಕ್ಷ ರೂ |
| ೧೪) | ಕರ್ನಾಟಕ | ... | ಲಾಭ | ೭೬.೬೮ ಲಕ್ಷ ರೂ. |
| ೧೫) | ಅಳಂದ್ | ... | ನಷ್ಟ | ೪೬.೮೦ ಲಕ್ಷ ರೂ. |

ಶ್ರೀ ಜಿ. ರಾಜುಗೌಡ.— ೩—೪ ಕಾರ್ಖಾನೆಗಳಲ್ಲಿ ನಷ್ಟವಾಗಿದೆಯೆಂದು ಹೇಳಿದಿರಿ. ಈ ಕಾರ್ಖಾನೆಗಳಲ್ಲಿ ಸರ್ಕಾರದ ಷೇರು ಬಂಡವಾಳ ಎಷ್ಟು ಹಾಕಿದ್ದೀರಿ ? ಎಷ್ಟಕ್ಕೆ ಜಾಮೀನು ಕೊಟ್ಟಿದ್ದೀರೆಂಬುದನ್ನು ತಿಳಿಸುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.— ಈ ವಿವರಗಳು ಈಗ ನನ್ನಲ್ಲಿಲ್ಲ. ಅದನ್ನು ತರಿಸಿ ಕೊಡುತ್ತೇನೆ.

## ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವ

೧೪೪. ಶ್ರೀ ಬಸವಂತರೆಡ್ಡಿ (ಸೇಡಂ).— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಪಾಖಿಲ್, ಸೀಲಾರಕೋಟಿ, ಹೊಸಹಳ್ಳಿ, ಕೃಷ್ಣಾಪುರ, ತೆಲಕೂರ, ನಾಡಪಲ್ಲಿ, ಬೆನಕನಹಳ್ಳಿ, ತೊಲ್ಮಾಮಿಡಿ ಶಕಲಾತ್‌ಹಳ್ಳಿ, ಮೆದಕ್ ಮತ್ತು ಶಂಕರ ರಾಜ್‌ಪುರ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮೇಲ್ಕಂಡ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ಶಾಶ್ವತವಾಗಿ ನಿವಾರಿಸಲು ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಬಿ. ಬಸವಲಿಂಗಪ್ಪ. (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಶುಸಂಗೋಪನ ಮಂತ್ರಿಗಳು).—

ಅ) ಬಂದಿದೆ.

ಆ) ಆಯಾ ಗ್ರಾಮದ ಅವಶ್ಯಕತೆಯನ್ನು ಪರಿಗಣಿಸಿ ಕುಡಿಯುವ ನೀರಿನ ಅಭಾವವನ್ನು ನಿವಾರಿಸಲು ವ್ಯವಸ್ಥೆ ಮಾಡಲಾಗುವುದು.

ಶ್ರೀ ಬಸವಂತರೆಡ್ಡಿ.—ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಕೇಳಿರತಕ್ಕ ಎಲ್ಲಾ ಗ್ರಾಮಗಳಲ್ಲೂ ಕೆರು ನೀರು ಸರಬರಾಜು ಯೋಜನೆ ಮಂತ್ರಿ ಗ್ರಾಮಾಂತರ ನೀರು ಸರಬರಾಜು ಯೋಜನೆಗಳು ಮಂಜೂರು ಆಗಿ ಸುಮಾರು ೩—೪ ವರ್ಷಗಳಾಗಿದೆ. ಆದರೆ ಇದುವರೆಗೂ ಅವು ಕಾರ್ಯಗತವಾಗಿಲ್ಲ. ಇದರಿಂದ